ಮಲ್ಲಿಕಾರ್ಜುನ, ಸುರಧೇನುಪುರ

ಹೆಂಡತಿ ತನ್ನ ಗಂಡನನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವುದು ಏಕೆ?



'ಇಂತಹವನನ್ನು ನನಗೆ ಗಂಟು ಹಾಕಿದ್ದು ನ್ಯಾಯವಾ?' ಎಂದು ದೇವನನ್ನು ಪ್ರಶ್ನಿಸಲು.

ಸುರೇಶ್ ಬಿ.ವಿ. ಬೆಂಗಳೂರು

ಹಿಜಾಬ್ ಧರಿಸಿ ಎಂದರೆ ಹಾಗೆಯೇ ಬರುತ್ತಾರೆ. ಮಾಸ್ಕ್ ಧರಿಸಿ ಎಂದರೂ ಅಷ್ಟೆ. ಹೀಗೇಕೆ?

ಅಡಿಗರ ಪ್ರಭಾವವಂತೆ – ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವುದೇ ಜೀವನ!

ಎಚ್. ಸಿದ್ಧಾರ್ಥ, ಈದು

ಶಿಖರಪ್ರಾಯಕ್ಕೂ, ಕಳಶಪ್ರಾಯಕ್ಕೂ ಇರುವ ವ್ಯತ್ಯಾಸವೇನು?

ಚಾರಣಕ್ಕೆ ಸೂಕ್ತವಾದ ಟೀನೇಜ್ ಶಿಖರ–ಪ್ರಾಯ. ದೇವನತ್ತ ಅಟ್ಟುವ ಓಲ್ಡೇಜ್ ಕಳಶ–ಪ್ರಾಯ.

ಶೃತಿ ರಿಗ್ರೆಟ್ ಅಯ್ಯರ್, ಅಮೇರಿಕಾ

ಅಪ್ಪ ದುಡ್ಡು ತರ್ತಾನೆ. ಅಮ್ಮ ಅಡುಗೆ ಮಾಡ್ತಾಳೆ. ಮಕ್ಕಳು?



ಜಂಕ್‌ಫುಡ್ ಆರ್ಡರ್ ಮಾಡಿ ಅಪ್ಪನ್ದುಡ್ಡು, ಅಮ್ಮನಡುಗೆ ಎರಡನ್ನೂ ವೇಸ್ಟ್ ಮಾಡ್ತಾರೆ.

ಜೀವಿ, ಗೊಂಡೇದಹಳ್ಳಿ

ಮಠಾಧೀಶರಿಗೇಕೆ ಶ್ರೀ ಶ್ರೀ ಶ್ರೀ ಎಂದು ಮೂರು ಬಾರಿ ಕರೆಯುತ್ತಾರೆ?

ಮಠಶ್ರೀ, ಧನಶ್ರೀ, ಪ್ರಭಾವಶ್ರೀ!

ಕೆ.ಪುರುಷೋತ್ತಮ ರೆಡ್ಡಿ, ಪಾವಗಡ

ಆಹ್ವಾನಪತ್ರಿಕೆಯಲ್ಲಿ ಸಕುಟುಂಬ, ಸಪರಿವಾರ ಎಂದಿರುತ್ತದಲ್ಲ, ಅದರಲ್ಲಿನ ಸ ಏನು?

ಸ= ಸರಿಯಾದ – ಅಫಿಷಿಯಲ್. ಅನಧಿಕೃತ ಮಂದಿಗೆ ಪ್ರವೇಶವಿಲ್ಲ!

ಡಾ.ಸೀಮಂತಿನಿ ದೇಸಾಯಿ, ಬೆಂಗಳೂರು

ನಾವು ದೇಶವನ್ನು ಕಟ್ಟುತ್ತಿದ್ದೇವೆಯೆ ಯಾ ಬಿಡಿಸುತ್ತಿದ್ದೇವೆಯೆ?

ವಿದೇಶಿ ಸಂಸ್ಕೃತಿ, ಬಂಡವಾಳಕ್ಕೆ ದೇಶವನ್ನು ಕಟ್ಟಿಕೊಡುತ್ತಿದ್ದೇವೆ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ರಾತ್ರಿಯೂ ಸಹ ಸೂರ್ಯ ಬೆಳಗುತ್ತಿದ್ದರೆ?

'ಥೂ! ಸಾಫ್ಟ್‌ವೇರ್‌ನವರನ್ನು ನೋಡೀ ನೋಡೀ ಸೂರ್ಯನೂ ಹಾಳಾಗ್ಹೋದ' ಎನ್ನುತ್ತಾರೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಪಿತೃಪಕ್ಷಕ್ಕೂ, ರಾಜಕೀಯ ಪಕ್ಷಕ್ಕೂ ಏನು ವ್ಯತ್ಯಾಸ?

ಪಿತೃಪಕ್ಷದಲ್ಲಿ ಸತ್ತವರಿಗೆ ಮಾತ್ರ ತರ್ಪಣ ಬಿಡುತ್ತಾರೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕೊರೊನಾ ಸಂಸಾರ; ಲಾಕ್‌ಡೌನ್ ತಾಳಿ. ಹನಿಮೂನ್?

ಜೋಡಿ ಕ್ವಾರಂಟೈನ್.

ಉಮಾ ಎಂ.ವಿ. ಮತ್ತೂರು

'ನಾನು' ಎಂಬುದು ದೇಹವೋ ಅಥವಾ ಆತ್ಮವೋ ಗುರುವರ್ಯ?

ನಾನು ಸಾಯಬಲ್ಲೆನಾದ್ದರಿಂದ 'ನಾನು' ದೇಹವೇ. ಆತ್ಮಕ್ಕೆ ಸಾವಿಲ್ಲ.

ತಲಕಾಡು ಶ್ರೀನಿಧಿ, ಬೆಂಗಳೂರು

ಧರ್ಮಪತ್ನಿ ಅಂತಾರೆ. ಧರ್ಮಪತಿ ಯಾಕಿಲ್ಲ?

ಪರನಾರಿಯ ನೆರಳು ಕಂಡರೂ ಪತಿ ಧರ್ಮ ಮರೆಯಬಲ್ಲನಾದ್ದರಿಂದ.

ಪಿ. ಜಯವಂತ ಪೈ, ಕುಂದಾಪುರ

ಸನ್ಯಾಸಿಗೂ, ಸಂಸಾರಿಗೂ ವ್ಯತ್ಯಾಸವೇನು?

ಅವನು ದಂಡ ಹಿಡಿಯುತ್ತಾನೆ; ಇವನು ದಂಡ ಕಟ್ಟುತ್ತಾನೆ.

ನಿರುಕ್ತಾ, ಬೆಂಗಳೂರು

ಇಡೀ ಪ್ರಪಂಚವೇ ಒಂದು ದೇಶವಾಗುವುದು ಯಾವಾಗ?

ಮತ್ತೊಮ್ಮೆ ಆಡಮ್ & ಈವ್ ಮಾತ್ರ ಇರುವ ಕಾಲ ಬಂದಾಗ.

## ವಾರದ ಪ್ರಶ್ನೆ

ಬಿ.ಆರ್. ಉಷಾ, ಬೆಂಗಳೂರು

ಸಕ್ಕರೆ ಕಾಯಿಲೆಯಿದ್ದ ಹೆಣದ ಬಾಯಿಗೆ ಅಕ್ಕಿ ಹಾಕಬೇಕೋ, ಗೋಧಿ ಹಾಕಬೇಕೊ?

ಸಿರಿಧಾನ್ಯ ಬೆಸ್ಟು; ಇನ್ಸುಲಿನ್ ಚುಚ್ಚಿ, ಧಾನ್ಯ ಸುರಿದು, ನಂತರ ಒಂದು ವಾಕ್ ಕರ್‍ಕೊಂಡ್ಹೋಗಿ.

ಜಯಶ್ರೀ, ಬೆಂಗಳೂರು

ಹಿಂಗು ತಿಂದ ಮಂಗನಿಗೂ, ಹೆಂಡ ಕುಡಿದ ಮಂಗನಿಗೂ ಏನು ವ್ಯತ್ಯಾಸ?

ಹಿಂಗು ತಿಂದ ಮಂಗ ವಾಸನೆ ತಿಳಿಯದಿರಲೆಂದು ಪಾನ್ ಹಾಕಿಕೊಳ್ಳುವುದಿಲ್ಲ.

ರತ್ನಜ, ಮೈಸೂರು

ಭ್ರಮೆಗೂ, ವಾಸ್ತವಕ್ಕೂ ಏನು ವ್ಯತ್ಯಾಸ?

ರಾಮರಾಜ್ಯ ಭ್ರಮೆ; ಡ್ರಾಮರಾಜ್ಯ ವಾಸ್ತವ.

ವಿಜಯ್ ಹೆಮ್ಮಿಗೆ, ಮೈಸೂರು

ಕಳ್ಳರೇ ಪೊಲೀಸರಾದರೆ ಅವರು ಯಾರನ್ನು ಹಿಡಿಯುತ್ತಾರೆ?



ಬಕರಾಗಳನ್ನು.

ರಾಜೀವ್ ಮಾಗಲ್, ಸಕಲೇಶಪುರ

ಆನ್‌ಲೈನ್ ವಿದ್ಯಾರ್ಥಿಗಳಿಗೂ, ಆಫ್‌ಲೈನ್ ವಿದ್ಯಾರ್ಥಿಗಳಿಗೂ ವ್ಯತ್ಯಾಸ?

ಆನ್‌ಲೈನ್ ವಿದ್ಯಾರ್ಥಿಗಳು ಆಟ, ಊಟ, ಪಾಠ ಮೂರನ್ನೂ ಒಟ್ಟಿಗೆ ಕೈಗೊಳ್ಳಬಹುದು.

ಎಚ್.ಎಮ್. ಅನಂತಪದ್ಮನಾಭ, ಮೈಸೂರು

Naughtyಗೂ, ನಾಟಿಗೂ ವ್ಯತ್ಯಾಸವೇನು?

ನಾಟಿ ಸೀಮಾಸೀಮಿತ; Naughty ಸೀಮಾತೀತ.

ವಿ. ಹೇಮಂತಕುಮಾರ್, ಬೆಂಗಳೂರು

ಹೆಣ್ಣಿನ ಬರವಣಿಗೆಯು ಗಂಡಿನ ಬರವಣಿಗೆಗಿಂತ ಅಂದವಾಗಿರಲು ಕಾರಣವೇನು?

ಹುಬ್ಬನ್ನೇ ಆಗಲಿ, ಅಕ್ಷರಗಳನ್ನೇ ಆಗಲಿ ಗಮನವಿಟ್ಟು ತಿದ್ದಿಕೊಳ್ಳುವುದರಿಂದ.

■ ರಾಮ್